ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ...

# ಆರ್‌ಸಿಯು ಧ್ವನಿ

R.C.U DHWANI

E-mail: dhwani@rcub.ac.in

ಮೇ 2022 ಸಂಪುಟ: 5 ಸಂಚಿಕೆ 05 ಪುಟಗಳು: 2 ಖಾಸಗಿ ಪ್ರಚಾರಕ್ಕಾಗಿ ಮಾತ್ರ.....

# ಅದ್ದೂರಿಯ ಎನ್‌ಎಸ್‌ಎಸ್ ಯುವಜನೋತ್ಸವ






**1) ಆರ್‌ಸಿಯು ಎನ್.ಎಸ್.ಎಸ್. ಕೋಶದ ವತಿಯಿಂದ ಆಜಾದಿ ಕಾ ಅಮೃತ ಮಹೋತ್ಸವ ನಿಮಿತ್ತವಾಗಿ ಹಮ್ಮಿಕೊಂಡ ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮದ ನಿಮಿತ್ತ ಆಯೋಜಿಸಲಾದ ಸಾಂಸ್ಕೃತಿಕ ಮೆರವಣಿಗೆಗೆ ಕುಲಪತಿ ಪ್ರೊ. ಎಂ. ರಾಮಚಂದ್ರಗೌಡ ಅವರು ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿದರು. (ಚಿತ್ರ: ಮಂಜುನಾಥ ಡೊಣುರ).**
**2) ಎನ್.ಎಸ್.ಎಸ್ ರಾಜ್ಯ ಮಟ್ಟದ ಯುವಜನೋತ್ಸವ ಸಮಾರೋಪ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.**

## 'ಪಠ್ಯೇತರ ಕಾರ್ಯಗಳು ಜ್ಞಾನ ವೃದ್ಧಿಗೆ ಪೂರಕ'

**ಬೆಳಗಾವಿ:** ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಎನ್.ಎಸ್.ಎಸ್. ಕೋಶದ ವತಿಯಿಂದ ಆಜಾದಿ ಕಾ ಅಮೃತ ಮಹೋತ್ಸವ ನಿಮಿತ್ತ ಆಯೋಜಿಸಿದ ರಾಜ್ಯ ಮಟ್ಟದ ಐದು ದಿನಗಳ ಯುವಜನೋತ್ಸವದ ಕಾರ್ಯಕ್ರಮ ಮಂಗಳವಾರ (5 ಏಪ್ರೀಲ್ 2022) ನಗರದ ಹಿಂಡಲ್ಕೋ ಇಂಡಸ್ಟ್ರೀಸ್ ಲಿಮಿಟೆಡ್ ಸಭಾಭವನದಲ್ಲಿ ಜರುಗಿತು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ. ಎಂ. ರಾಮಚಂದ್ರಗೌಡ ಮಾತನಾಡಿ, ನಾವೆಲ್ಲ ಸ್ವಯಂಸೇವಕರಾಗಿ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ನಿಸ್ವಾರ್ಥ ಭಾವನೆ, ದೇಶ ಪ್ರೇಮ ಹಾಗೂ ಕೌಶಲ್ಯ ಅಭಿವೃದ್ಧಿಗೆ ಸಹಾಯವಾಗುತ್ತದೆ ಎಂದರು.

ಯುವಜನೋತ್ಸವವು ಎಲ್ಲರಲ್ಲಿ ಭ್ರಾತೃತ್ವ ಭಾವನೆ ಬೆಳಸಿ ರಾಷ್ಟ್ರದ ಸಂಸ್ಕೃತಿಯನ್ನು ಅರಿತು ಉತ್ತಮ ಜೀವನ ನಡೆಸಲು ಸಹಾಯಕವಾಗುತ್ತದೆ ಎಂದರು.

ರಾಜ್ಯ ಎನ್.ಎಸ್.ಎಸ್ ಅಧಿಕಾರಿ ಪ್ರತಾಪ ಲಿಂಗಯ್ಯ ಮಾತನಾಡಿ, ರಾಜ್ಯದಲ್ಲಿನ ಎಲ್ಲ ಎನ್.ಎಸ್.ಎಸ್ ಸ್ವಯಂಸೇವಕರು ತುಂಬಾ ಉತ್ಸುಕತೆಯಿಂದ ಕೆಲಸ ಮಾಡುತ್ತಿದ್ದಾರೆ. ಸಮಸ್ತ ದೇಶದಲ್ಲಿ ಕರ್ನಾಟಕ ರಾಜ್ಯದ ಎನ್.ಎಸ್.ಎಸ್ ಘಟಕ ಮಾದರಿಯಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಯು ಉತ್ತಮ ಚಾರಿತ್ರ್ಯ, ಪ್ರಾಮಾಣಿಕತೆ ಮತ್ತು ಶಿಸ್ತುಬದ್ಧ ಜೀವನ ರೂಢಿಸಿಕೊಂಡಲ್ಲಿ ಮಾತ್ರ ಒಬ್ಬ ಉತ್ತಮ ನಾಯಕನಾಗಲು ಸಾಧ್ಯ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಜಾನಪದ ಸಾಹಿತಿ ಪ್ರೊ. ಶಂಭು ಬಳಿಗಾರ ಮಾತನಾಡಿ, ವಿದ್ಯಾರ್ಥಿಗಳು ಎನ್.ಎಸ್.ಎಸ್ ಸ್ವಯಂಸೇವಕರಾಗಿ ನಿಸ್ವಾರ್ಥತೆಯಿಂದ ಸೇವೆಯಲ್ಲಿ ತೆ- ೊಡಗಿ, ಪ್ರತಿ ಹಳ್ಳಿಯಲ್ಲಿ ಶ್ರಮದಾನ ಮಾಡಬೇಕು ಹಾಗೂ ಸಮಾಜದ ಒಳಿತಿಗಾಗಿ ಹುಮ್ಮಸ್ಸಿನಿಂದ ಸೇವೆಯಲ್ಲಿ ಪಾಲ್ಗೊಳ್ಳಬೇಕೆಂದು ಹೇಳಿದರು.

ಗೌರವಾನ್ವಿತ ಅತಿಥಿಗಳಾಗಿ ಆಗಮಿಸಿದ್ದ ಹಿಂಡಾಲ್ಕೋ ಇಂಡಸ್ಟ್ರಿಸ್ ಲಿಮಿಟೆಡ್‌ನ ಜಂಟಿ ಅಧ್ಯಕ್ಷ ಮತ್ತು ಘಟಕ ಮುಖ್ಯಸ್ಥ ಕೆ. ಕುಮಾರವೇಲ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಸ್ವಯಂ ಸೇವೆ ಅತ್ಯಂತ ಅವಶ್ಯಕ ಮತ್ತು ಪಠ್ಯಕ್ರಮದಲ್ಲಿ ಎನ್.ಎಸ್.ಎಸ್. ಅಳವಡಿಕೆಯಾಗಲಿ. ಎನ್.ಎಸ್.ಎಸ್‌ದಲ್ಲಿ ಭಾಗವಹಿಸುವುದರಿಂದ ಸಾಂಸ್ಕೃತಿಕ, ನೈತಿಕ ಮತ್ತು ಸೇವಾ ಪ್ರವೃತಿ ಬೆಳೆಯುತ್ತದೆ ಎಂದು ಹೇಳಿದರು.

ರಾಜ್ಯದ 20 ವಿಶ್ವವಿದ್ಯಾಲಯಗಳ ಕಾರ್ಯಕ್ರಮ ಅಧಿಕಾರಿಗಳು ಹಾಗೂ 250 ಸ್ವಯಂಸೇವಕರು ಉಪಸ್ಥಿತರಿದ್ದರು. ಉದ್ಘಾಟನಾ ಕಾರ್ಯಕ್ರಮದ ಮೊದಲು ಆರ್‌ಸಿಯು ವಿದ್ಯಾಸಂಗಮ ಆವರಣದಲ್ಲಿ ಎನ್.ಎಸ್.ಎಸ್ ಸ್ವಯಂಸೇವಕರಿಂದ ಸಾಂಸ್ಕೃತಿಕ ಮೆರವಣಿಗೆ ಜರುಗಿತು.

ಆರ್‌ಸಿಯು ಎನ್.ಎಸ್.ಎಸ್. ಘಟಕದ ಸಂಯೋಜನಾಧಿಕಾರಿ ಪ್ರೊ. ಬಿ.ಎಸ್.ನಾವಿ ಕಾರ್ಯಕ್ರಮದ ಗಣ್ಯಮಾನ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮಂತ ಮಾದರ ಹಾಗೂ. ಮಹಾಭಳೇಶ್ವರ ಸಾಬಣ್ಣವರ ಎನ್.ಎಸ್.ಎಸ್ ಗೀತೆ ಹಾಡಿದರು. ಡಾ. ಪಿ. ನಾಗರಾಜ ವಂದನಾರ್ಪಣೆ ನೆರವೇರಿಸಿದರು. ಕುಮಾರಿ ಮಂಜುಳಾ ಕಾರ್ಯಕ್ರಮ ನಿರೂಪಿಸಿದರು.

### ಸಮಾರೋಪ ಕಾರ್ಯಕ್ರಮ

**ಬೆಳಗಾವಿ:** ನಗರದ ಹಿಂಡಾಲ್ಕೋ ಇಂಡಸ್ಟ್ರೀಸ್ ಆವರಣದಲ್ಲಿನ ಸಭಾ ಭವನದಲ್ಲಿ ಆರ್‌ಸಿಯು ರಾಷ್ಟ್ರೀಯ ಸೇವಾ ಯೋಜನೆ ಕೋಶದಿಂದ ಜರುಗಿದ ಐದು ದಿನಗಳ ರಾಜ್ಯ ಮಟ್ಟದ ಯುವಜನೋತ್ಸವ ಸಮಾರೋಪ ಸಮಾರಂಭವು ಶನಿವಾರ (9 ಏಪ್ರೀಲ್ 2022) ಜರುಗಿತು.

ಹಿಂಡಾಲ್ಕೋ ಇಂಡಸ್ಟ್ರೀಸ್ ಲಿಮಿಟೆಡ್ ಮಾನವ ಸಂಪನ್ಮೂಲ ವಿಭಾಗದ ಉಪಾಧ್ಯಕ್ಷ ವಿಶ್ವಾಸ್ ಶಿಂಧೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಕುಲಪತಿ ಪ್ರೊ. ಎಂ. ರಾಮಚಂದ್ರಗೌಡ ಅಧ್ಯಕ್ಷತೆ ವಹಿಸಿದ್ದರು.

ಭಾಗ್ಯಶ್ರೀ ಗುಂಡಾ ವರದಿ ವಾಚಿಸಿದರು. ಮಹೇಶ ಪೂಜಾರಿ ಬಹುಮಾನ ವಿತರಣೆ ಕಾರ್ಯಕ್ರಮ ಮತ್ತು ಯಲ್ಲಪ್ಪ ದಬಾಲೆ ಸನ್ಮಾನ ಕಾರ್ಯಕ್ರಮ ನೆರವೇರಿಸಿದರು. ಆರ್‌ಸಿಯು ಎನ್.ಎಸ್.ಎಸ್ ಸಂಯೋಜನಾಧಿಕಾರಿ ಪ್ರೊ. ಬಿ. ಎಸ್. ನಾವಿ ವಂದಿಸಿದರು. ಡಾ. ದೀಪಾ ಮಾಳಗಿ ನಿರೂಪಿಸಿದರು.

# ಸರೋದ್ ವಾದಕ ಪಂಡಿತ ರಾಜೀವ ತಾರಾನಾಥ್‌ಗೆ ಗೌರವ ಡಾಕ್ಟರೇಟ್

**ಮೈಸೂರು:** ಖ್ಯಾತ ಸರೋದ್ ವಾದಕ, ಪದ್ಮಶ್ರೀ ಪುರಸ್ಕೃತ ಪಂಡಿತ ರಾಜೀವ ತಾರಾನಾಥ್ ಅವರಿಗೆ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಬುಧವಾರ (27 ಏಪ್ರೀಲ್ 2022) ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ವಿವಿಯ 9ನೇ ಘಟಿಕೋತ್ಸವದಲ್ಲಿ ರಾಜೀವ ತಾರಾನಾಥ ಅವರನ್ನು ಗೌರವ ಡಾಕ್ಟ-ರೇಟ್ ಪದವಿ ಪ್ರದಾನಕ್ಕೆ ಆಯ್ಕೆ ಮಾಡಲಾಗಿತ್ತು. ಘಟಿಕೋತ್ಸವ ಸಮಾರಂಭದಲ್ಲಿ ಅವರು ಪಾಲ್ಗೊಳ್ಳದ ಹಿನ್ನೆಲೆಯಲ್ಲಿ ಮೈಸೂರಿನ ಕುವೆಂಪುನಗರದ ಅವರ ನಿವಾಸದಲ್ಲಿ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪಂಡಿತ್ ರಾಜೀವ್ ತಾರಾನಾಥ, ಸಂಗೀತದಲ್ಲಿ ನಾನೊಬ್ಬ ಶಿಷ್ಯ ಅಷ್ಟೇ. ನನ್ನ ಗುರು ಉಸ್ತಾದ್ ಅಲಿ ಅಕ್ಬರ್ ಖಾನ್. ನನ್ನ ಗುರುಗಳಾದ ಅಲಿ ಅಕ್ಬರ್ ಖಾನ್ ಅವರು ನನ್ನ ದೇವರು. ಗುರುಗಳು ಯಾವಾಗಲೂ ನನ್ನ ಮೂರು ಬೆರಳಿನಲ್ಲಿ ವಿರಾಜಿಸುತ್ತಾರೆ. ಸರೋದ್ ತಾಳ ಬದ್ಧವಾಗಿ ನುಡಿಸಿದರೆ ಅವರು ಆನಂದ ಪಡುತ್ತಾ-ರೆ. ಇಲ್ಲದಿದ್ದರೆ ಅವರು ನನ್ನ ಬೆರಳು ತೊರೆದು ಹೋಗುತ್ತಾರೆ ಎಂದು ಗುರುಗಳನ್ನು ಸ್ಮರಿಸಿದರು.



**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವದ ನಿಮಿತ್ತ ಸರೋದ್ ವಾದಕ ಪಂಡಿತ ರಾಜೀವ ತಾರಾನಾಥ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಕುಲಪತಿ ಪ್ರೊ.ಎಂ.ರಾಮಚಂದ್ರಗೌಡ, ಕುಲಸಚಿವ ಬಸವರಾಜ ಪದ್ಮಶಾಲಿ, ಮೌಲ್ಯಮಾಪನ ಕುಲಸಚಿವ ಪ್ರೊ. ವೀರನಗೌಡ ಪಾಟೀಲ, ಸಿಂಡಿಕೇಟ್ ಸದಸ್ಯ ಶ್ರೀನಿವಾಸ ಶಾಸ್ತ್ರಿ ಮತ್ತು ಪ್ರೊ. ಕೃಷ್ಣ ಮನವಲ್ಲಿ ಚಿತ್ರದಲ್ಲಿದ್ದಾರೆ.**

ಕರ್ನಾಟಕ ಬಹಳಷ್ಟು ಪ್ರೀತಿ ಕೊಟ್ಟಿದೆ. ಟೀಕೆ, ಟಿಪ್ಪಣಿ ಎಲ್ಲವನ್ನು ಹೊಟ್ಟೆಗೆ ಹಾಕಿಕೊಂಡು, ಕನ್ನಡಿಗರು ಹೊಗಳಿಕೆ ಮತ್ತು ಹೂವಿನ ಹಾರ ನೀಡಿ ಸನ್ಮಾನಿಸಿದ್ದಾರೆ. ಈ ನಾಡಿನ ಜನತೆ ಸರೋದ್ ಸಂಗೀತವನ್ನು ಬಹುವಾಗಿ ಮೆಚ್ಚುಕೊಂಡಿದ್ದಾರೆ. ರಾಣಿ ಚನ್ನಮ್ಮ ವಿವಿ ಪ್ರೀತಿಯಿಂದ ನನ್ನನ್ನು ನೆನಪಿಸಿಕೊಂಡಿದೆ. ನನ್ನ ಬಗ್ಗೆ ಒಳ್ಳೆಯ ಮೆಚ್ಚುಗೆಯ ಮಾತಗಳನ್ನಾಡಿದ್ದಾರೆ. ನೀವು ಕೊಟ್ಟ ಪ್ರೀತಿಯನ್ನು ಏಕೆ ಮರಳಿ ಕೊಡಲಿ. ಅವರು ನೀಡಿದ ಗೌರವ ಮತ್ತು ಪ್ರೀತಿಗೆ ಅಭಾರಿಯಾಗಿದ್ದೇನೆ ಎಂದರು.

ಆರ್‌ಸಿಯು ಕುಲಪತಿ ಪ್ರೊ. ಎಂ. ರಾಮಚಂದ್ರಗೌಡ ಮಾತನಾಡಿ, 9ನೇ ಘಟಿಕೋತ್ಸವದಲ್ಲಿ ರಾಜೀವ ತಾರಾನಾಥ ಅವರಿಗೆ ಗೌರವ ಡಾಕ್ಟರೇಟ್ ಕೊಡುವ ಮೂಲಕ ವಿವಿ ತನ್ನ ಘನತೆ ಹೆಚ್ಚಿಸಿಕೊಂಡಿದೆ ಎಂದರು.

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ನಾಗೇಶ ಬೆಟ್ಟಕೋಟೆ, ಕುಲಸಚಿವ ಡಾ.ದೇವರಾಜ್, ಪಂಡಿತ ಇಂದೂಧರ ನಿರೋಡಿ, ಆರ್‌ಸಿಯು ಕುಲಸಚಿವರಾದ ಪ್ರೊ. ಬಸವರಾಜ ಪದ್ಮಶಾಲಿ, ಪ್ರೊ.ವೀರನಗೌಡ ಪಾಟೀಲ, ಸಿಂಡಿಕೇಟ್ ಸದಸ್ಯ ಶ್ರೀನಿವಾಸ ಶಾಸ್ತ್ರಿ, ಧ್ವನ್ಯಾಲೋಕದ ನಿರ್ದೇಶಕ ಪ್ರೊ.ಸಿ.ಎನ್.ಶ್ರೀನಾಥ, ಪ್ರೊ.ಕೃಷ್ಣ ಮನವಳ್ಳಿ ಮತ್ತು ಪತ್ರಕರ್ತ ಗಣೇಶ ಅಮೀನಗಡ್ ಇದ್ದರು.



ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ಜಯಂತಿ ಕಾರ್ಯಕ್ರಮ ಜರುಗಿತು. ಕುಲಪತಿ ಪ್ರೊ. ಎಂ.ರಾಮಚಂದ್ರಗೌಡ, ಮೌಲ್ಯಮಾಪನ ಕುಲಸಚಿವ ಪ್ರೊ. ವೀರನಗೌಡ ಪಾಟೀಲ, ಡಾ.ಅಂಬೇಡ್ಕರ್ ಪೀಠದ ಸಂಯೋಜಕ ಡಾ.ಗಜಾನನ ನಾಯಕ, ಎಸ್‌ಸಿ ಮತ್ತು ಎಸ್‌ಟಿ ಘಟಕದ ಮುಖ್ಯಸ್ಥ ಪ್ರೊ. ಚಂದ್ರಕಾಂತ ವಾಘ್ಮರೆ ಹಾಗೂ ಇತರರು ಚಿತ್ರದಲ್ಲಿದ್ದಾರೆ.




ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಉಪಪ್ರಧಾನಿ ದಿವಂಗತ ಜಗಜೀವನ ರಾಮ ಅವರ 115ನೇ ಜಯಂತಿ ಕಾರ್ಯಕ್ರಮ ಜರುಗಿತು. ಕುಲಪತಿ ಪ್ರೊ. ಎಂ.ರಾಮಚಂದ್ರಗೌಡ, ಎಸ್‌ಸಿ ಮತ್ತು ಎಸ್‌ಟಿ ಘಟಕದ ಮುಖ್ಯಸ್ಥ ಪ್ರೊ. ಚಂದ್ರಕಾಂತ ವಾಘ್ಮರೆ ಸೇರಿದಂತೆ ವಿವಿಯ ವಿವಿಧ ವಿಭಾಗಗಳ ಮುಖ್ಯಸ್ಥರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಚಿತ್ರದಲ್ಲಿದ್ದಾರೆ.




ಆರ್‌ಸಿಯು ಎನ್.ಎಸ್.ಎಸ್. ಕೋಶದ ವತಿಯಿಂದ ಆಜಾದಿ ಕಾ ಅಮೃತ ಮಹೋತ್ಸವ ನಿಮಿತ್ತವಾಗಿ ಹಮ್ಮಿಕೊಂಡ ರಾಜ್ಯ ಮಟ್ಟದ ಯುವಜನೋತ್ಸವದ ಸಾಂಸ್ಕೃತಿಕ ಮತ್ತು ಜಾಗೃತಿ ಜಾಥಾದಲ್ಲಿ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಎನ್.ಎಸ್.ಎಸ್ ಘಟಕದ ಸ್ವಯಂಸೇವಕರು ಕೋವಿಡ್-19 ವಿರುದ್ಧ ವೈದ್ಯರು, ಪೊಲೀಸ್‌ರು ಮತ್ತು ದಾದಿಯರು ತೋರಿದ ಸೇವಾಕಾರ್ಯದ ರೂಪಕವನ್ನು ಪ್ರಸ್ತುತ ಪಡಿಸಿದರು.




ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮರಾಠಿ ಅಧ್ಯಯನ ವಿಭಾಗವು ಮರಾಠಿ ಭಾಷಾ ದಿನದ ನಿಮಿತ್ತ ಏರ್ಪಡಿಸಿದ್ದ ಕವಿ ಸಮ್ಮೇಳನ ಮತ್ತು ಸ್ವರಚಿತ ಕಾವ್ಯ ವಾಚನ ಕಾರ್ಯಕ್ರಮದಲ್ಲಿ ಲೇಖಕಿ ಅಶ್ವಿನಿ ಓಗಲೆ ಮಾತನಾಡಿದರು.




ಆರ್‌ಸಿಯು ಸಮಾಜಕಾರ್ಯ ವಿಭಾಗವು ಖಾನಾಪುರ ತಾಲೂಕಿನ ಅಶೋಕನಗರ ಗ್ರಾಮದಲ್ಲಿ ಏರ್ಪಡಿಸಿದ್ದ ಸಮಾಜಕಾರ್ಯ ಗ್ರಾಮೀಣ ಶಿಬಿರ 2021-22ರ ನಿಮಿತ್ತ ವಿದ್ಯಾರ್ಥಿಗಳಿಂದ ಗ್ರಾಮದಲ್ಲಿ ಶಿಕ್ಷಣದ ಮಹತ್ವ ತಿಳಿಸುವ ಜಾಗೃತಿ ಜಾಥಾ ಜರುಗಿತು.

# ಎರಡು ದಿನದ ವಿಸ್ತರಣಾ ಸರಣಿ ಕಾರ್ಯಕ್ರಮ ಸಂಪನ್ನ

**ನಿಂಗ್ಯಾನಟ್ಟಿ:** ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಪರಾಧಶಾಸ್ತ್ರ ಮತ್ತು ಅಪರಾಧೀಕ ನ್ಯಾಯ ವಿಭಾಗ ಮತ್ತು ಬಂಬರಗಾ ಗ್ರಾಮ ಪಂಚಾಯಿತಿ ಸಂಯುಕ್ತ ಆಶ್ರಯದಲ್ಲಿ ನಿಂಗ್ಯಾನಟ್ಟಿ ಗ್ರಾಮದಲ್ಲಿ 3 ಮತ್ತು 4 ಮಾರ್ಚ್ 2022 ರಂದು ಎರಡು ದಿನಗಳ ವಿಸ್ತರಣಾ ಸರಣಿ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಜರುಗಿತು.

ರಾಣಿ ಚನ್ನಮ್ಮ ವಿವಿಯ ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ ಅವರು ಸಸಿಗೆ ನೀರುಣಿಸುವ ಮೂಲಕ ವಿಸ್ತರಣಾ ಸರಣಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಅವರು ಮಾತನಾಡಿ, ಗ್ರಾಮೀಣ ಭಾಗದಲ್ಲಿ ಬಡತನದ ಕಾರಣದಿಂದ ಅನೇಕ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇದರ ಕುರಿತಾಗಿ ಸಮಗ್ರ ಸಮೀಕ್ಷೆ ನಡೆಸಿ, ಪೂರ್ಣ ಅಧ್ಯಯನ ಕೈಗೊಂಡು ಸರ್ಕಾರ-ಕ್ಕೆ ವರದಿಯನ್ನು ಸಲ್ಲಿಸಬೇಕು ಎಂದರು.

ವಿಶ್ವವಿದ್ಯಾಲಯಗಳು ಕೇವಲ ಬೋಧನೆಗೆ ಸೀಮಿತವಾಗದೆ ಸಮಾಜದ ವಿವಿಧ ಸಮಸ್ಯೆಗೆ ಪರಿಹಾರ ಒದಗಿಸುವ ಕೇಂದ್ರಗಳಾಗಿ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಬೇಕು. ಸಾಮಾಜಿಕ ಹಿತದ ಜವಾಬ್ದಾರಿಯನ್ನು ಅತ್ಯಂತ ದಕ್ಷತೆಯಿಂದ ನಿಭಾಯಿಸುವ ನಿಟ್ಟಿನಲ್ಲಿ ವಿವಿಯ ವಿದ್ಯಾರ್ಥಿಗಳನ್ನು ಅಣಿಗೊಳಿಸಬೇಕು ಎಂದರು.



ಆರ್‌ಸಿಯು ಅಪರಾಧಶಾಸ್ತ್ರ ಮತ್ತು ಅಪರಾಧೀಕ ನ್ಯಾಯ ವಿಭಾಗ ನಿಂಗ್ಯಾನಟ್ಟಿ ಗ್ರಾಮದಲ್ಲಿ ಆಯೋಜಿಸಿದ ಎರಡು ದಿನಗಳ ವಿಸ್ತರಣಾ ಸರಣಿ ಕಾರ್ಯಕ್ರಮಕ್ಕೆ ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ ಚಾಲನೆ ನೀಡಿದರು.

ವಿಭಾಗದ ಮುಖ್ಯಸ್ಥ ಪ್ರೊ. ಆರ್.ಎನ್.ಮನಗೂಳಿ ಅಧ್ಯಕ್ಷತೆ ವಹಿಸಿದ್ದರು. ಡಾ. ನಂದಿನಿ ದೇವರಮನಿ, ಚಂದ್ರಶೇಖರ ಎಸ್.ವಿ. ಪಂಚಾಯಿತಿ ಅಧ್ಯಕ್ಷ ದತ್ತಾ ಬಂದುರ್ಗಿ, ಯಲ್ಲಮ್ಮ ನಾಯಿಕ್, ಗ್ರಾಮದ ಹಿರಿಯರು, ವಿಭಾಗದ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಹಾಜರಿದ್ದರು.

ಸರಣಿ ಕಾರ್ಯಕ್ರಮದ ಸಂಯೋಜಕಿ ಡಾ.ಮಹೇಶ್ವರಿ ಕಾಚಾಪುರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪಿಡಿಒ ನಾಗೇಂದ್ರ ಪತ್ತಾರ ಸ್ವಾಗತಿಸಿದರು.

# ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೆಳಗಾವಿ ಪಾತ್ರ ಅನನ್ಯ

**ವಿದ್ಯಾಸಂಗಮ:** 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಮೂರು ದಶಕಗಳ ಪೂರ್ವದಲ್ಲಿಯೇ ಬ್ರಿಟಿಷರ್ ವಿರುದ್ಧ ಕಿತ್ತೂರಿನ ರಾಣಿ ಚನ್ನಮ್ಮ ಸಮರ ಸಾರುವ ಮುಖಾಂತರ ದೇಶದ ಸ್ವಾತಂತ್ರ್ಯದ ಹೋರಾಟದ ಕಿಚ್ಚನ್ನು ನಾಡಿನಲ್ಲಿ ಪಸರಿಸಲು ಕಾರಣವಾಗಿದ್ದಳು ಎಂದು ಸಾಹಿತಿ ಮತ್ತು ಹಿರಿಯ ಪತ್ರಕರ್ತ ಡಾ.ಸರಜೂ ಕಾಟ್ಕರ್ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಇಂಗ್ಲಿಷ್ ಅಧ್ಯಯನ ವಿಭಾಗದಲ್ಲಿ 'ಆಜಾದಿ ಕಾ ಅಮೃತ ಮಹೋತ್ಸವ' ಆಚರಣೆಯ ಅಂಗವಾಗಿ 'ಸ್ವಾತಂತ್ರ ಹೋರಾಟದಲ್ಲಿ ಬೆಳಗಾವಿ ಜಿಲ್ಲೆಯ ಪಾತ್ರ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಝಾನ್ಸಿ ರಾಣಿ ಲಕ್ಷ್ಮಿಬಾಯಿ ಮೊದಲ ಸ್ವಾತಂತ್ರ್ಯ ಹೋರಾಟದ ಮಹಿಳೆಯೆಂದು ಉಲ್ಲೇಖಿಸುತ್ತೇವೆ. ಆದರೆ ಅದಕ್ಕೂ ಮೂರು ದಶಕಗಳ ಪೂರ್ವದಲ್ಲಿ 1824 ರಲ್ಲಿ ನಮ್ಮ ನೆಲದ ವೀರ ಮಹಿಳೆ ರಾಣಿ ಚನ್ನಮ್ಮ ಸ್ವಾತಂತ್ರ್ಯದ ಕಿಡಿಯನ್ನು ಹೊತ್ತಿಸಿದಳು. ಅದೇ ರೀತಿ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಅನೇಕರು ವೀರ ಮರಣ ಹೊಂದಿದ್ದಾರೆ. ನರಗುಂದಕರ್ ಬಾಬಾಸಾಹೇಬ, ಚನ್ನಪ್ಪ ವಾಲಿ, ಗಂಗಾಧರ ದೇಶಪಾಂಡೆ ಮತ್ತು ಸದ್ಯಪ್ಪ ತೋಪನ್ನವರ ಅವರ ತ್ಯಾಗ ನಮಗೆ ಸದಾ ಆದರ್ಶ ಎಂದು ಹೇಳಿದರು.



ಆರ್‌ಸಿಯು ಇಂಗ್ಲಿಷ್ ಅಧ್ಯಯನ ವಿಭಾಗದಲ್ಲಿ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಮತ್ತು ಸಾಹಿತಿ ಡಾ.ಸರಜೂ ಕಾಟ್ಕರ್ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಇಂಗ್ಲೀಷ್ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ. ನಾಗರತ್ನಾ ಪರಾಂಡೆ ಮಾತನಾಡಿ, ಯುವಜನಾಂಗ ದೇಶದ ಹಿತದ ಕುರಿತಾಗಿ ಕಾರ್ಯತತ್ಪರಾಗಬೇಕು ಮತ್ತು ದೇಶದ ಸ್ವಾತಂತ್ರ್ಯದ ರಕ್ಷಣೆಯು ಯುವಕರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಸಹಾಯಕ ಪ್ರಾಧ್ಯಾಪಕರಾದ ಪೂಜಾ ಹಲ್ಯಾಳ ಹಾಗೂ ಡಾ. ಕವಿತಾ ಕುಸುಗಲ್ಲ ಹಾಜರಿದ್ದರು.

ಆಶಾ ಕಾಂಬಳೆ ಪ್ರಾರ್ಥಿಸಿದರು. ಪುಷ್ಪಾ ವಡ್ಡರ ಸ್ವಾಗತಿಸಿದರು. ವಂದನಾ ಮೋಜಿ ನಿರೂಪಿಸಿದರು. ಸೋನಾಲಿ ಕಲ್ಲೋಳಿ ವಂದಿಸಿದರು.

# 'ಜೀವನಮೌಲ್ಯ ಕಲಿಕೆಗೆ ಶಿಕ್ಷಣ ಆದತ್ಯೆ ನೀಡಲಿ'

**ವಿದ್ಯಾಸಂಗಮ:** ಆರ್‌ಸಿಯು ಶಿಕ್ಷಣ ಅಧ್ಯಯನ ವಿಭಾಗದ ಪಿಹೆಚ್.ಡಿ ಕೋರ್ಸ್‌ವರ್ಕ ಸಮಾರೋಪ ಸಮಾರಂಭ ಗುರುವಾರ (21 ಏಪ್ರೀಲ್ 2022 ರಂದು) ವಿವಿಯಲ್ಲಿ ಜರುಗಿತು.

ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಪ್ರೊ. ಎಸ್.ಎಸ್.ಪಾಟೀಲ ಮಾತನಾಡಿ, ಶಿಕ್ಷಣ ವ್ಯವಸ್ಥೆಯು ಭೌತಿಕ ಕಟ್ಟಡಗಳ ಜೊತೆಗೆ ವಿದ್ಯಾರ್ಥಿಗಳಲ್ಲಿ ಮಾನವೀಯ ಸಂಬಂಧಗಳನ್ನು ಹಾಗೂ ಪ್ರಾಮಾಣಿಕತೆಯನ್ನು ಹೆಚ್ಚಿಸಬೇಕಾಗಿದೆ. ಪರಿಪೂರ್ಣ ಜ್ಞಾನ ಹೊಂದಿದ ಶಿಕ್ಷಕರನ್ನು ಸಿದ್ಧಗೊಳಿಸುವುದು ಉನ್ನತ ಶಿಕ್ಷಣದ ಉದ್ದೇಶವಾಗಬೇಕು ಎಂದರು.

ಶಿಕ್ಷಕ ವೃತ್ತಿ ಯಲ್ಲಿ ಸವಾಲುಗಳು ಇವೆ. ಈ ಸವಾಲುಗಳನ್ನು ಎದುರಿಸಲು ನಮಗೆ ವಿವಿಧ ಸಂಪನ್ಮೂಲಗಳ ಮೂಲಕ ಕಲಿಕೆ ದ್ವಿಗುಣವಾಗುತ್ತಾ ಸಾಗಬೇಕು ಎಂದರು.




ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಿಕ್ಷಣ ಅಧ್ಯಯನ ಶಾಸ್ತ್ರ ವಿಭಾಗದ ಕೋರ್ಸ್‌ವರ್ಕ ಸಮಾರೋಪ ಕಾರ್ಯಕ್ರಮದಲ್ಲಿ ಪ್ರೊ. ಎಸ್.ಎಸ್.ಪಾಟೀಲ ಮಾತನಾಡಿದರು. ಪ್ರೊ. ಮಂಜಣ್ಣ ಮತ್ತು ಡಾ. ಎಂ.ಸಿ.ಎರ್ರಿಸ್ವಾಮಿ ಚಿತ್ರದಲ್ಲಿದ್ದಾರೆ.

ಆರ್‌ಸಿಯು ರಸಾಯನಶಾಸ್ತ್ರ ವಿಭಾಗದ ಪ್ರೊ. ಮಂಜಣ್ಣ ಮಾತನಾಡಿ, ಸಂಶೋಧನೆಗಳು ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣದ ಒಲವುಗಳ ಬಗ್ಗೆ ಗಮನಹರಿಸಬೇಕಾಗಿದೆ. ಸ್ಥಳೀಯದಿಂದ ಜಾಗತಿಕ ಮಟ್ಟದವರೆಗೆ ಸಂಶೋಧನೆಗಳು ಸಾಗಬೇಕು. ಸಂಶೋಧನಾ ವಿದ್ಯಾರ್ಥಿಗಳು ಜ್ಞಾನದ ಆಳಕ್ಕೆ ಇಳಿದು ಅಧ್ಯಯನಗಳನ್ನು ಮಾಡಿ ಮಾಹಿತಿ ಪಡೆಯಬೇಕು ಎಂದರು.

ವಿಭಾಗದ ಮುಖ್ಯಸ್ಥ ಡಾ. ಎಂ.ಸಿ.ಎರ್ರಿಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಡಾ. ಕನಕಪ್ಪ ಪೂಜಾರ, ರಸನಾ ಹುಲಮನಿ ಹಾಗೂ ಮುರಗೇಶ ಕೆ. ಹಾಜರಿದ್ದರು. ರೇಖಾ ಕಿತ್ತೂರ ಪ್ರಾರ್ಥಿಸಿದರು. ಗೌರಿ ಶ್ರೀಶೈಲ ಸ್ವಾಗತಿಸಿದರು. ಗಂಗಾಧರ ಸೊಪ್ಪಿನಮಠ ವಂದಿಸಿದರು. ಅರ್ಚನಾ ಪೂಜಾರ ನಿರೂಪಿಸಿದರು.

ಮಾರ್ಗದರ್ಶಕರು: ಪ್ರೊ. ಕಮಲಾಕ್ಷಿ ಜಿ. ತಡಸದ, ಸಂಪಾದಕರು: ವಿದ್ಯಾಶ್ರೀ ಹಾಲಕೇರಿಮಠ, ಪೂಜಾ ಹೆಗಡೆ ಮತ್ತು ಅರುಣ ಹೊಸಮಠ. ಉಪಸಂಪಾದಕರು: ಪ್ರಥಮ ಮತ್ತು ದ್ವಿತೀಯ ವರ್ಷದ ಪತ್ರಿಕೋದ್ಯಮ ವಿದ್ಯಾರ್ಥಿಗಳು ಆರ್.ಸಿ.ಯು ಬೆಳಗಾವಿ.
ಪ್ರಕಾಶನ ಮತ್ತು ಮುದ್ರಣ : ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಭೂತರಾಮನಹಟ್ಟಿ, ಬೆಳಗಾವಿ-591156. E-mail: dhwani@rcub.ac.in.